ಇ) ಹೆಚ್ಚುವರಿಯಾಗಿ 04 ಬಸ್‌ಗಳನ್ನು 2003–04ನೇ ಸಾಲಿನಲ್ಲಿ ಪಡೆಯಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯೊಂದಿಗೆ ವ್ಯವಹರಿಸಲಾಗುತ್ತಿದೆ.

ಈ) ಹೆಚ್ಚುವರಿ ಬಸ್‌ಗಳು ಬಂದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು.

ರಾಜ್ಯದಲ್ಲಿ ನಿರ್ಮಿಸಿದ ಆಶ್ರಯ ಮನೆಗಳು ಬಿದ್ದುಹೋಗಿರುವುದು

3550(4056) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 2001–02 ರಿಂದ 2003–04 ಮೇ ಅಂತ್ಯದವರೆಗೆ ಎಷ್ಟು ಆಶ್ರಯ ಮನೆಗಳನ್ನು ನಿರ್ಮಿಸಲಾಗಿದೆ ;

ಆ) ಇದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು ;

ಇ) ರಾಜ್ಯದಲ್ಲಿ ಇತ್ತೀಚೆಗೆ ಹುಬ್ಬಳ್ಳಿ, ಬೆಳಗಾವಿ ಹಾಗೂ ಇತರ ಭಾಗಗಳಲ್ಲಿ ನಿರ್ಮಿಸಿದ್ದ ಆಶ್ರಯ ಮನೆಗಳು ಬಿದ್ದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದಲ್ಲಿ, ಎಷ್ಟು ಮನೆಗಳು ಬಿದ್ದು ಹೋಗಿವೆ ; ಇದಕ್ಕೆ ಕಾರಣಗಳೇನು ;

ಉ) ಹೆಚ್ಚಿನ ಸಂಖ್ಯೆಯಲ್ಲಿ ಕಳಪೆ ಮನೆಗಳನ್ನು ನಿರ್ಮಿಸುವುದಕ್ಕೆ ಬದಲಾಗಿ ಉತ್ತಮ ಗುಣಮಟ್ಟದ ಮನೆಗಳನ್ನು ನಿರ್ಮಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು :

ಊ) ಈ ರೀತಿ ಕಳಪೆ ಗುಣಮಟ್ಟದ ಮನೆಗಳನ್ನು ನಿರ್ಮಿಸಿದವರ ಮೇಲೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು):

ಅ) 3,25,821 ಮನೆಗಳನ್ನು ನಿರ್ಮಾಣ ಮಾಡಲಾಗಿದೆ

ಆ) ರೂ. 68,049.85 ಲಕ್ಷಗಳು

ಇ) ಬೆಳಗಾವಿಯಲ್ಲಿ ಮಾತ್ರ, ಆಶ್ರಯ ಮನೆಗಳು ಬಿದ್ದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) 22 ಮನೆಗಳು ಬಿದ್ದು / ಬಿರುಕು ಬಿಟ್ಟಿರುತ್ತದೆ.

ಇದಕ್ಕೆ ಕಾರಣಗಳು ಕೆಳಕಂಡಂತಿವೆ:

1. ಮನೆ ಕಟ್ಟುವ ಸ್ಥಳವು ಕಪ್ಪು ಎರೆ ಮಣ್ಣಿನಿಂದ ಕೂಡಿರುತ್ತದೆ. ಕಪ್ಪು ಎರೆ ಮಣ್ಣನ್ನು ತಾಂತ್ರಿಕ ಪರೀಕ್ಷೆಗೆ ಒಳಪಡಿಸಿ ಅದಕ್ಕೆ ತಕ್ಕಂತೆ ಬುನಾದಿಯನ್ನು ಹಾಕಬೇಕಾಗಿತ್ತು. ಹಾಗೆ ಮಾಡಿಲ್ಲ.
2. ಮನೆಯ ಸುತ್ತ–ಮುತ್ತ ನೀರು ನಿಂತು ಬುನಾದಿಯನ್ನು ದುರ್ಬಲ ಮಾಡಿದೆ.
3. ಫಲಾನುಭವಿಗಳು ಉದಾಸೀನ ತೋರಿರುವುದು.

ಉ) 2000–01ರಿಂದ ಕಟ್ಟಿದ ಮನೆಗಳ ಗುಣಮಟ್ಟವು ಒಳ್ಳೆಯದಾಗಿದ್ದು, ಯಾವುದೇ ಕಳಪೆ ಮನೆಗಳನ್ನು ನಿರ್ಮಿಸಲಾಗುತ್ತಿಲ್ಲ.

ಊ) ಈ ಹಿಂದೆ ಗುಣಮಟ್ಟದ ಮನೆಗಳನ್ನು ನಿರ್ಮಿಸುವುದಕ್ಕೆ ಏಜೆನ್ಸಿಗಳನ್ನು ನೇರ ಹೊಣೆ ಮಾಡಲಾಗುವುದು. ಹಾಗೂ ಮನೆಗಳ ದುರಸ್ತಿ ಹಾಗೂ ಪುನರ್ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಸಂಬಂಧಪಟ್ಟ ಏಜೆನ್ಸಿಗಳೇ ಭರಿಸಬೇಕು.